ಓ ಎಸ್ ನಂ. 168/2018

ಪಿ ಡಬ್ಲ್ಯೂ-2

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 21.09.2023

ಮುಂದುವರೆದ ಪಾಟೀ ಸವಾಲುಃ ಶ್ರೀ ಡಿ ಆರ್ ಎನ್ ಪ್ರತಿವಾದಿ ಪರ ವಕೀಲರಿಂದ

ದಿನಾಂಕ 05.03.1994 ರಂದು ನನ್ನ ತಂದೆ ಮತ್ತು ನನ್ನ ತಂದೆಯ ಅಣ್ಣ-ತಮ್ಮಂದಿರು ಮತ್ತು ನನ್ನ ಅಜ್ಜಿ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದು ಸದರಿ ವಿಭಾಗದ ಪ್ರಕಾರ 1 ನೇ ಪ್ರತಿವಾದಿಗೆ ಬಂದ ಹಿಸ್ಸಾ ಸ್ವತ್ತನ್ನು 1 ನೇ ಪ್ರತಿವಾದಿಯು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಯ ಐಟಂ ನಂಬರ್ 3 ವಿಭಾಗದ ಮೂಲಕ 1 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಹಾಗೂ ಸದರಿ ಸ್ವತ್ತನ್ನು ರಾಮೇಗೌಡ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲ ಮೋಸದಿಂದ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. 3 ನೇ ಪ್ರತಿವಾದಿಯು ಮಧು ಎನ್ನುವವರಿಗೆ 10 ಗುಂಟೆ ಆಸ್ತಿಯನ್ನು ಮೋಸದಿಂದ ಮಾರಾಟ ಮಾಡಿರುತ್ತಾರೆ. ಯಾವ ವರ್ಷದಲ್ಲಿ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿಲ್ಲ, ನನ್ನ ತಂದೆ ತೀರಿಕೊಂಡ ನಂತರ ನಮಗೆ ವಿಷಯ ಗೊತ್ತಾಗಿರುತ್ತದೆ. ನಾವು ಪ್ರತಿವಾದಿಯರಲ್ಲಿ ಹಣವನ್ನು ಕೇಳಿದಾಗ ಪ್ರತಿವಾದಿಯರು ನೀಡದೇ ಇದ್ದಾಗ ನಾವು ಹುಡುಕಿದಾಗ ಮಾರಾಟ ಮಾಡಿರುವ ವಿಚಾರ ಗೊತ್ತಾಯಿತು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನಮ್ಮ ತಾಯಿಗೆ ಗೊತ್ತಿರುತ್ತದೆ ಎನ್ನುತ್ತಾರೆ. ನನ್ನ ತಂದೆ ಮೃತ ಪಟ 3 ತಿಂಗಳ ನಂತರ ಮಾರಾಟ ಮಾಡಿರುವ ವಿಚಾರ ಗೊತ್ತಾಯಿತು. ದಾವಾ ಸಲ್ಲಿಸುವ ಸಮಯದಲ್ಲಿ ನಾನು ಈ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ಕ್ರಯದಾರರಾದ ಮಧು ರವರನ್ನು ಈ ದಾವೆಯಲ್ಲಿ

ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಂದೆ 15.08.2014 ರಂದು ಮೃತಪಟ್ಟಿರುತ್ತಾರೆ. ದಾವಾಸ್ತಿ ಐಟಂ ನಂಬರ್ 3 ನ್ನು 1 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಐಟಂ ನಂಬರ್ ಆಸ್ತಿಗೆ 1 ನೇ ಪ್ರತಿವಾದಿಯೇ ಹಕ್ಕುದಾರ ಸ್ವಾಧೀನದಾರರಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ತನ್ನ ಹಿಸ್ಸೆಗೆ ಬಂದ ಐಟಂ ನಂಬರ್ 3 ರ ಆಸ್ತಿಯನ್ನು ರಾಮೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ದಾವಾಸ್ತಿಯ ಐಟಂ ನಂಬರ್ 3 ನ್ನು ಮಾರಾಟ ಮಾಡಿರುವ ವಿಚಾರವನ್ನು ದಾವಾ ಸಲ್ಲಿಸುವ ಸಮಯದಲ್ಲಿ ವಕೀಲರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ.

ಸರ್ವೆ ನಂಬರ್ 167/ಪಿ3 ರಲ್ಲಿ 10 ಗುಂಟೆ ಆಸ್ತಿ 3 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲದೆ ಮಾಡಿರುತ್ತಾರೆ ಎನ್ನುತ್ತಾರೆ. 3 ನೇ ಪ್ರತಿವಾದಿಯು ವಿಭಾಗ ಪತ್ರದ ಮೂಲಕ ತನ್ನ ಹಿಸ್ಸೆಗೆ ಬಂದ ಆಸ್ತಿಯನ್ನು ದಿನಾಂಕ 14.07.1997 ರಂದು ಚನ್ನೇಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲದೇ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಕ್ರಯದ ಮೂಲಕ ಬಂದ 10 ಗುಂಟೆ ಆಸ್ತಿಯಲ್ಲಿ ಚನ್ನೇಗೌಡರವರು ಹಕ್ಕುದಾರ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಸಹ ಸದರಿ ಸ್ವತ್ತನ್ನು ನಾನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯದಾರರಾದ ಚನ್ನೇಗೌಡರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ವಿಭಾಗ ಪತ್ರದ ಮೂಲಕ ದಾವಾಸ್ತಿ ಐಟಂ ನಂಬರ್ 4ರ ಪೈಕಿ 2.20 ಗುಂಟೆ ಜಮೀನು 3 ನೇ ಪ್ರತಿವಾದಿಯ ಹೆಸರಿಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ವಿಚಾರ ನನಗೆ ನನ್ನ ತಂದೆ ಮೃತಪಟ್ಟ ನಂತರ ಗೊತ್ತಾಗಿರುತ್ತದೆ. ಈ ಬಗ್ಗೆ ನಾನು ದಾವೆಯನ್ನು ಸಲ್ಲಿಸುವಾಗ ನಮ್ಮ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ವಕೀಲರಿಗೆ ಸದರಿ ವಿಚಾರವನ್ನು ತಿಳಿಸಲು ತೊಂದರೆಯಿರಲಿಲ್ಲ.

3 ನೇ ಪ್ರತಿವಾದಿಯ ಹಿಸ್ಸೆಗೆ ಬಂದ 2.20 ಎಕರೆ ಪೈಕಿ 20 ಗುಂಟೆ ಆಸ್ತಿಯನ್ನು ದಿನಾಂಕ 16.05.2002 ರಂದು ಕೆ ಮಧು ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 20 ಗುಂಟೆ ಆಸ್ತಿಯಲ್ಲಿ ಕೆ ಮಧು ಅವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ .

ಸದರಿ ಕಾರಣದಿಂದಲೇ ದಾವಾಸ್ತಿ ಐಟಂ ನಂಬರ್ 4ರ ಚೆಕ್ಕುಬಂದಿಯನ್ನು ನಮೂದಿಸುವಾಗ ಪೂರ್ವಕ್ಕೆ ಮಧು ಅವರ ಜಮೀನು ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಚನ್ನೇಗೌಡರವರು ಆಸ್ತಿಯನ್ನು 3 ನೇ ಪ್ರತಿವಾದಿಯಿಂದ ಖರೀದಿಸಿದ್ದರಿಂದ ದಾವಾಸ್ತಿ ಐಟಂ ನಂಬರ್ 3ರ ಚೆಕ್ಕುಬಂದಿಯನ್ನು ನಮೂದಿಸುವಾಗ ಉತ್ತರಕ್ಕೆ ಚನ್ನೇಗೌಡರವರ ಜಮೀನು ಎಂದು ನಮೂದಿಸಿರುತ್ತೇನೆ ಎಂದರೆ ಮಾರಾಟ ಮಾಡಿರುವ ವಿಚಾರ ಗೊತ್ತಿಲ್ಲ ಎನ್ನುತ್ತಾರೆ.

ದಿನಾಂಕ 05.03.1994 ರಂದು ನಮ್ಮ ಕುಟುಂಬದಲ್ಲಿ ವಿಭಾಗವಾಗಿ ವಿಭಾಗದಲ್ಲಿ ಬಂದ ಸ್ವತ್ತುಗಳಲ್ಲಿ ಪ್ರತ್ಯೇಕವಾಗಿ ವಾಸವಿರುವ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 1 ಮತ್ತು 3 ನೇ ಪ್ರತಿವಾದಿಯು ತಮಗೆ ಬಂದಿರುವ ಹಿಸ್ಸಾ ಸ್ವತ್ತಿನ ಪೈಕಿ ಕೆಲವು

ಸ್ವತ್ತುಗಳನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಸಹ ನಾನು ಮೋಸದಿಂದ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸರ್ವೆ ನಂಬರ್ 139, 167, 185, 424/1, 424/2, 424/3, 424/5, 424/4 ಸ್ವತ್ತುಗಳ ಮೇಲೆ ದಾವೆ ಸಲ್ಲಿಸಿರುತ್ತೇನೆ. ಸದರಿ ಸ್ವತ್ತುಗಳ ಒಟ್ಟು ವಿಸ್ತೀರ್ಣ 12.50 ಎಕರೆ ಆಗಿರುತ್ತದ. ದಾವಾಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

ಪ್ರತಿವಾದಿಯರು ಯಾವ ದಿನಾಂಕದಂದು ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ತೀರಿಕೊಂಡ ಒಂದು ವಾರದ ನಂತರ ಹೊರಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ಪ್ರತಿವಾದಿಯರು ನಮ್ಮನ್ನು ಮನೆಯಿಂದ ಹೊರಹಾಕಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಡುವ ಪೂರ್ವದಲ್ಲಿ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ತಮಗೆ ಬಂದ ಹಿಸ್ಸಾ ಸ್ವತ್ತಿನಲ್ಲಿ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ . ಪ್ರತಿವಾದಿಯರು ನಮ್ಮನ್ನು ಮನೆಯಿಂದ ಹೊರಹಾಕಿರುವ ಬಗ್ಗೆ ನಾವು ದೂರು ನೀಡಿರುವುದಿಲ್ಲ. ದೂರು ನೀಡಲು ನಮಗೆ ತೊಂದರೆಯಿರಲಿಲ್ಲ. ಒಂದು ವೇಳೆ ಪ್ರತಿವಾದಿಯರು ನಮ್ಮನ್ನು ಮನೆಯಿಂದ ಹೊರಹಾಕಿದ್ದೇ ಆಗಿದ್ದಲ್ಲಿ ನಾವು ದೂರನ್ನು ಕೊಡುತ್ತಿದ್ದೆವು ಪ್ರತಿವಾದಿಯರು ನಮ್ಮನ್ನು ಮನೆಯಿಂದ ಹೊರಹಾಕದೇ ಇದ್ದುದರಿಂದ ನಾವು ದೂರು ನೀಡಿಲ್ಲ ಎಂದರೆ ಸರಿಯಲ್ಲ.

ಓ ಎಸ್ ನಂ. 168/2018

ಪಿ ಡಬ್ಲ್ಯೂ-2

ದಾವಾಸ್ತಿಗಳಲ್ಲಿ ಯಾವ ಐಟಂ ಆಸ್ತಿಯು ಬಾಗಾಯ್ತು, ಕುಷ್ಕಿ ತರಿ ಜಮೀನು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯ ಯಾವ ಐಟಂ ನಂಬರ್ ಆಸ್ತಿಯಲ್ಲಿ ಕೊಳವೆ ಬಾವಿಯಿದೆ ಮತ್ತು ಕೊಳವೆ ಬಾವಿಯಲ್ಲಿರುವ ಪಂಪ್ ಸೆಟ್ ನ ಆರ್ ಆರ್ ನಂಬರ್ ಗೊತ್ತಿಲ್ಲ. ದಾವಾಸ್ತಿಯ ಯಾವ ಐಟಂ ನಂಬರ್ ಆಸ್ತಿಯಲ್ಲಿ ಕಬ್ಬು ಮತ್ತು ರಾಗಿಯನ್ನು ಬೆಳೆಯುತ್ತಾರೆ ಎಂದು ನಿಖರವಾಗಿ ಗೊತ್ತಿಲ್ಲ. ನಮ್ಮ ನಮ್ಮ ಹಿಸ್ಸಾ ಬಾಬ್ತು ಸ್ವತ್ತಿನಲ್ಲಿ ನಮಗೆ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ದಿನಾಂಕ 05.03.1994 ರಂದು ಆದ ವಿಭಾಗದ ಪ್ರಕಾರ 1 ಮತ್ತು 3 ನೇ ಪ್ರತಿವಾದಿಯರು ತಮ್ಮ ಕುಟುಂಬಕ್ಕೆ ಬಂದ ಹಿಸ್ಸಾ ಸ್ವತ್ತಿನಲ್ಲಿ ತಮ್ಮ ಕುಟುಂಬದೊಂದಿಗೆ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಬಂದ ಹಿಸ್ಸಾ ಸ್ವತ್ತನ್ನು ನನ್ನ ತಂದೆಯ ಜೀವಿತಾವದಿಯಲ್ಲಿ ನಾವು ಮತ್ತು ನನ್ನ ತಾಯಿ ಹಾಗೂ ನನ್ನ ತಂದೆ ಸೇರಿ ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ಸದರಿ ಸ್ವತ್ತನ್ನು ನಾವು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಿಂದ ಬಂದ ಆದಾಯದಿಂದಲೇ ನಮ್ಮ ತಾಯಿ ಕುಟುಂಬದ ನಿರ್ವಹಣೆ ಮಾಡಿ ನಮಗೆ ವಿದ್ಯಾಭ್ಯಾಸವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಿಂದ ಬಂದ ಆದಾಯದಿಂದಲೇ ನಮ್ಮ ತಾಯಿ ನಮ್ಮ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ .

ನಮ್ಮ ತಂದೆಗೆ ಬಂದ ಹಿಸ್ಸಾ ಸ್ವತ್ತನ್ನು ನಾವು ಹಣವನ್ನು ಖರ್ಚು ಮಾಡಿ ಅಭಿವೃದ್ದಿಪಡಿಸಿಲ್ಲ ಎಂದರೆ ಸರಿಯಲ್ಲ.  1 ಮತ್ತು 3 ನೇ ಪ್ರತಿವಾದಿಯರು ತಮಗೆ ಬಂದ

ಓ ಎಸ್ ನಂ. 168/2018

ಪಿ ಡಬ್ಲ್ಯೂ-2

ಹಿಸ್ಸಾ ಸ್ವತ್ತನ್ನು ಸಾಲ ಮಾಡಿ ಅಭಿವೃದ್ದಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಲವನ್ನು ತೀರಿಸುವ ಸಲುವಾಗ ತನ್ನ ಹಿಸ್ಸೆಗೆ ಬಂದ ಕೆಲವು ಸ್ವತ್ತುಗಳ ಪೈಕಿ ಕೆಲವು ಭಾಗವನ್ನು ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಮೋಸದಿಂದ ಮಾರಾಟ ಮಾಡಿರುತ್ತಾರೆ. ಕ್ರಯಕ್ಕೆ ಮಾರಾಟ ಮಾಡಿರುವ ವಿಷಯ ಗೊತ್ತಿದ್ದರೂ ಸಹ ಕ್ರಯಕ್ಕೆ ಮಾರಾಟ ಮಾಡಿದ ಸ್ವತ್ತನ್ನು ದಾವೆಯಲ್ಲಿ ಸೇರಿಸದೇ ಮತ್ತು ಕ್ರಯದಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೇ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ಮತ್ತು 3 ನೇ ಪ್ರತಿವಾದಿಯರು ಹೇರಳವಾಗಿ ಹಣ ಖರ್ಚು ಮಾಡಿ ಅಭಿವೃದ್ದಿ ಪಡಿಸಿಕೊಂಡಿರುವ ತಮ್ಮ ಹಿಸ್ಸಾ ಬಾಬ್ತು ಸ್ವತ್ತನ್ನು ಅಕ್ರಮವಾಗಿ ದಕ್ಕಿಹಾಕಿಕೊಳ್ಳಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಗೆ ಪೂರಕವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ .

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಸ.ಇ.ಎ.ಒ.,

ಸಹಿ/-

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.